ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ

ಹಿರೇಕೆರೂರು

ಸಿ.ಸಿ. ನಂಃ 1054/2021

ಸಿ.ಡಬ್ಲ್ಯೂಃ 5

**ಪಿ.ಡಬ್ಲ್ಯೂಃ 3**

ಸಾಕ್ಷಿದಾರರ ಹೆಸರುಃ - ಕರಬಸಪ್ಪ

ತಂದೆ ಹೆಸರು - ಕಲ್ಲಪ್ಪ ಭಂಗೀಗೌಡರ

ವಯಸ್ಸುಃ - 64 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ದೂದಿಹಳ್ಳಿ

ದಿನಾಂಕಃ 01-07-2025 ರಂದು ಸಾಕ್ಷಿಯನ್ನು ಕರೆಯಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿದಾರರಿಗೆ ನಿಪಿ-2 ರಿಂದ 6, 12 ರಿಂದ 14 ನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು ನಿಪಿ-2 ಮತ್ತು 12 ರ ಮಹಜರ ವರದಿಗಳಲ್ಲಿನ ಅವರ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಗಳನ್ನು **ನಿಪಿ-2 ಬಿ, 12 ಬಿ** ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಡಿದ್ದು ದಿಃ 09-04-2021 ರಂದು ನಮ್ಮ ಗ್ರಾಮದ ಮುಖ್ಯ ರಸ್ತೆಯಲ್ಲಿ ಬೆಳಿಗ್ಗೆ ಸುಮಾರು 6-00 ಗಂಟೆ ಸಮಯದಲ್ಲಿ ನಮ್ಮ ಗ್ರಾಮದ ಹೇಮಪ್ಪ ಹುಲ್ಲತ್ತಿರವರು ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಲಾರಿ ಒಂದು ಅತೀ ವೇಗವಾಗಿ ಬಂದು ಡಿಕ್ಕಿ ಹೊಡೆದು ಅಪಘಾತ ಪಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಜರ ಕಾಲಕ್ಕೆ ಸಹಿ ಮಾಡಿರುತ್ತೇನೆ. ಅಪಘಾತವಾದಾಗ ಸುಮಾರು 50-60 ಅಡಿ ಅಂತರದಲ್ಲಿ ನಾನು ಹೋಲಕ್ಕೆ ಹೋಗುತ್ತಿದ್ದೆ. ಅಪಘಾತ ಪಡಿಸಿ ಸದರಿ ಲಾರಿಯನ್ನು ನಿಲ್ಲಿಸದೇ ಚಾಲಕನು ಅಲ್ಲಿಂದ ಹೊರಟು ಹೋದನು. ತಕ್ಷಣ ನಾನು ಹತ್ತಿರ ಹೋಗಿ ನೋಡಿದಾಗ ಹೇಮಪ್ಪರವರ ತಲೆ ಜಜ್ಜಿ ಹೋಗಿದ್ದು, ಸ್ಥಳದಲ್ಲಿ ಮೃತಪಟ್ಟಿದ್ದರು. ಆ ಕಾಲಕ್ಕೆ ನಾನು, ಚಾಸಾ-4 ಹಾಗೂ ಚಾಸಾ-1 ರವರು ಇದ್ದೇವು. ಅಪಘಾತದ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ. ಮಧ್ಯಾಹ್ನ 1-00 ರಿಂದ 1-30 ರವರೆಗೆ ಪಂಚನಾಮೆ ಜರುಗಿಸಿರುತ್ತಾರೆ. ಸ್ಥಳದಲ್ಲಿ ಬಿದ್ದಿದ್ದ ಲಾರಿಯ ಇಂಡಿಕೇಟರ್, ಬಣ್ಣದ ಚೆಕ್ಕೆಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ.

2. ನಂತರ ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿ ಅಪಘಾತ ಪಡಿಸಿದ ಲಾರಿಯನ್ನು ಮಧ್ಯಾಹ್ನ 2-00 ರಿಂದ 2-30 ರವರೆಗೆ ಮಹಜರ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತಾರೆ. ನಿಪಿ-2 ರ ಕಾಲಕ್ಕೆ ಅಮಾನತ್ತು ಪಡಿಸಿಕೊಂಡಿದ್ದ ಇಂಡಿಕೇಟರ್ ಹಾಗೂ ಬಣ್ಣದ ಚೆಕ್ಕೆಯನ್ನು ಸದರಿ ಲಾರಿಗೆ ಹೊಂದಿಸಿ ನೋಡಲಾಗಿ ಅದು ಹೊಂದಾಣಿಕೆಯಾಗಿರುತ್ತದೆ. ವರದಿ ಸಿದ್ದಪಡಿಸಿ ನಮ್ಮ ಸಹಿ ಪಡೆದುಕೊಂಡರು. ಲಾರಿ ನಂಬರ ನನಗೆ ನೆನಪಿಲ್ಲ. ಅದು ಅಶೋಕ ಲೈಲ್ಯಾಂಡ್ ಲಾರಿ ಆಗಿರುತ್ತದೆ. ಪಂಚನಾಮೆ ಕಾಲಕ್ಕೆ ಆರೋಪಿಯನ್ನು ತೋರಿಸಿ ಅವರೇ ಲಾರಿಯ ಚಾಲಕ ಎಂದು ಪೋಲಿಸರು ತೋರಿಸಿರುತ್ತಾರೆ. ಅಪಘಾತದ ಸಂಬಂಧ ಚಾಸಾ-1 ರವರು ದೂರು ನೀಡಿರುತ್ತಾರೆ.

3. ಸಾಕ್ಷಿದಾರರು ಇಂಡಿಕೇಟರ್ ಹಾಗೂ ಬಣ್ಣದ ಚೆಕ್ಕಯನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾಗಿ ಎಂ. ಓ. -1 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್. ಡಿ. ಹೆಚ್. ವಕೀಲರಿಂದಃ</u>**

ಅಪಘಾತ ಆಗಿದೆ ಎನ್ನಲಾದ ಸ್ಥಳದಿಂದ 3 ಮೀಟರ ದೂರದಲ್ಲಿ ತಿರುವು ಇದೆ ಎಂದರೆ ಸರಿ. ಆದ್ದರಿಂದ ವಾಹನಗಳು ವೇಗವಾಗಿ ಹೋಗುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಕಾಲಕ್ಕೆ ಚಾಲಕನನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಪೋಲಿಸರು ಹೇಳಿದ ಮೇರೆಗೆ ಆರೋಪಿಯೇ ಚಾಲಕ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿ. ನಿಪಿ-2 ಮತ್ತು 12 ರ ಮಹಜರ ವರದಿಗಳಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಮಹಜರ ಕ್ರಮದಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-13 ಮತ್ತು 14 ರ ಪೋಟೋಗಳಲ್ಲಿ ಜಪ್ತು ಪಂಚನಾಮೆ ಕಾಲಕ್ಕೆ ಆರೋಪಿ ಇರಲಿಲ್ಲ ಎಂದರೆ ಪೋಟೋದಲ್ಲಿ ಇರಲಿಲ್ಲ, ಆದರೆ ಠಾಣೆಯ ಹತ್ತಿರ ಇದ್ದರು. ಎಂ.ಓ.-1 ರ ವಸ್ತುಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

**ಪಿ.ಡಬ್ಲ್ಯೂಃ 3**

ಮೃತ ಹೇಮಪ್ಪ ನಮ್ಮ ಗ್ರಾಮದವರು ಎಂದರೆ ಸರಿ. ಅವರಿಗೆ ಪರಿಹಾರ ಸಿಗಲಿ ಎನ್ನುವ ಕಾರಣಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 01-07-2025

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು